

ತನ್ನನ್ನು ತೀರ್ಥಹಳ್ಳಿಯ ಸಮೀಪದ ಈ ಪಾಳು ಮನೆಗೆ ತಂದು ಅಪ್ಪಯ್ಯ ಸಂಸಾರ ಹೂಡಿದ್ದರು. ತಮ್ಮದೆಂದು ಹೇಳಿಕೊಳ್ಳುವ ಯಾವ ಕೆಲಸವೂ ಇಲ್ಲದಿದ್ದ ಅಪ್ಪಯ್ಯ ಈ ಮನೆಗೆ ಬಂದು ನೆಲೆಸಿದ್ದು ಅಮ್ಮನ ಶಾಲೆಯ ಕೆಲಸದ ದೆಸೆಯಿಂದಲೋ ಅಥವಾ ಬೇರೆ ಯಾವ ಕಾರಣಕ್ಕೋ ಶ್ರೀಪಾದನಿಗೆ ಗೊತ್ತಿಲ್ಲ.

ಹಾಗೆ ನೋಡಿದರೆ ದೊಡ್ಡಪ್ಪಯ್ಯನೇನೂ ಅವನಿಗೆ ಹೊಸಬರಲ್ಲ. ಆದರೆ, ದೊಡ್ಡಪ್ಪಯ್ಯನ ಎರಡು ಮಕ್ಕಳ ಜೊತೆಗೆ ಅವನಿಗಂತಾ ಸಾಂಗತ್ಯವೇ ಬೆಳೆದಿರಲಿಲ್ಲ. ಈಗಲೂ ದೊಡ್ಡಪ್ಪಯ್ಯನೆಂದರೆ ಅವನಿಗೆ ನೆನಪಾಗುವುದು ವೈದಿಕಕ್ಕೆ ಬಾರ್ಕೂರಿಗೆ ಹೋಗುವಾಗಿನ ಆ ಬಸ್ಸಿನ ಪಯಣ ಮಾತ್ರ. ಅಮ್ಮನೊಂದಿಗೆ ಕಿಟಕಿ ಪಕ್ಕ ಕುಳಿತು ಎರಡೂ ಬದಿಯ ಹಚ್ಚ ಹಸುರಿನ ಹಾದಿಗೆ ಕಣ್ಣು ಕೀಲಿಸಿ ಓಡುವ ಬಸ್ಸಿನೊಂದಿಗೇ ಓಡುವ ಗಿಡ ಮರಗಳನ್ನೇ ಬೆರಗಾಗಿ ನಿಟ್ಟಿಸುತ್ತಾ ಸವೆಸುತ್ತಿದ್ದ ದಾರಿಯದು. ಆನಂತರ